61

# ತಹಶೀಲ್ದಾರರು ಬಳ್ಳಾರಿ ರವರ ನ್ಯಾಯಾಲಯದ ನಡುವಳಿಗಳು

| ವಾದಿಗಳು: | ಪ್ರತಿವಾದಿಗಳು: |
|---|---|
| ಶ್ರೀಮತಿ ಡಿ ಪಾರ್ವತಮ್ಮ ಗಂಡ ದಿ॥ ಡಿ.ಈರಬಸಪ್ಪ | ಕಂದಾಯ ನಿರೀಕ್ಷಕರು ಕೋಳೂರು |

**ವಿಷಯ:**-ಬಳ್ಳಾರಿ ತಾಲೂಕು ಕೋಳೂರು ಹೋಬಳಿಯ ಸೋಮಸಮುದ್ರ ಗ್ರಾಮದ ಸರ್ವೆ ನಂ:185/ಎ1 ವಿಸ್ತೀರ್ಣ:5.08, 185/ಎ/3ಸಿ ವಿಸ್ತೀರ್ಣ:5.00 ಎಕರೆ ಜಮೀನಿ ವಿಚಾರಣೆ ಕುರಿತು.

*******

ಪ್ರಸ್ತಾವನೆ:

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿ ತಾಲೂಕು ಕೋಳೂರು ಹೋಬಳಿಯ ಸೋಮಸಮುದ್ರ ಗ್ರಾಮದ ಸರ್ವೆ ನಂ:185/ಎ1 ವಿಸ್ತೀರ್ಣ:5.08, 185/ಎ/3ಸಿ ವಿಸ್ತೀರ್ಣ:5.00 ಎಕರೆ ಜಮೀನಿನ ಹಾಲಿ ಭೂಮಾಲಿಕರಾದ ದಮ್ಮೂರು ವೀರಬಸಪ್ಪ ತಂದೆ ಡಿ ಈರಪ್ಪ ಇವರು ಮೃತಪಟ್ಟಿರುತ್ತಾರೆ. ಅದರಂತೆ ಪೌತಿ ವಾರಸುದಾರರು ಪೌತಿ ಹಕ್ಕು ಬದಲಾವಣೆ ಮಾಡಲು ಮನವಿಯನ್ನು ಸಲ್ಲಿಸಿರುತ್ತಾರೆ. ಅದರಂತ ಅರ್ಜಿದಾರರು ಮನವಿಯಂತೆ ಕಂದಾಯ ನಿರೀಕ್ಷಕರು ಕೋಳೂರು ಇವರು ಗ್ರಾಮದಲ್ಲಿ ನಮೂನೆ-21ನ್ನು ಜಾರಿಮಾಡಿರುತ್ತಾರೆ ನಿಗದಿತ ಅವದಿಯಲ್ಲಿ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲ ಆದರೆ ಭೂಮಾಲಿಕರ ಮರಣ ಪ್ರಮಾಣ ಪತ್ರ ಸಲ್ಲಿಸದ ಕಾರಣ ಸದ್ರಿ ಪೌತಿ ಹಕ್ಕು ಬದಲಾವಣೆ ಕಡತವನ್ನು ಸದ್ರಿ ಪೌತಿ ಹಕ್ಕು ಬದಲಾವಣೆ ಕಡತವನ್ನು ಪರಿಶೀಲಿಸಿ ಇತ್ಯರ್ಥ ಪಡಿಸಲು ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕರಣವನ್ನು ಇತ್ಯರ್ಥ ಪಡಿಸಲು:28-03-2016, 11-04-2016,02-05-2016 ಮತ್ತು 23-05-2016 ರಂದು ವಿಚಾರಣೆ ನಡೆಸಲಾಗಿ ಅರ್ಜಿದಾರರು ಪ್ರಕಾರಣಕ್ಕೆ ಹಾಜರಾಗಿ ಹಾಲಿ ಭೂಮಾಲಿಕರು ದಿನಾಂಕ:16-10-2015 ರಂದು ಮೃತಪಟ್ಟಿರುವ ಮರಣ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ. ಮತ್ತು ದಮ್ಮೂರು ಈರಬಸಪ್ಪ, ಮತ್ತು ವೀರುಬಸಪ್ಪ ಎರಡು ಹೆಸರುಗಳು ತಾಳೆಯಾಗದ ಕಾರಣ ಕಂದಾಯ ನಿರೀಕ್ಷಕರು, ಬಳ್ಳಾರಿ ಇವರಿಗೆ ಪರಿಶೀಲಿಸಿ ವರದಿಸಲ್ಲಿಸು ಸೂಚಿಸಲಾಗಿರುತ್ತದೆ. ಅದರಂತೆ ಕಂದಾಯ ನಿರೀಕ್ಷಕರು ಬಳ್ಳಾರಿ ಇವರು ದಮ್ಮೂರು ಈರಬಸಪ್ಪ, ಮತ್ತು ವೀರುಬಸಪ್ಪ ಎರಡು ಹೆಸರುಗಳು ಒಂದೇ ಹಾಗಿರುತ್ತವೆಂದು ವರದಿಯನ್ನು ಸಲ್ಲಿಸಿರುವುದರಿಂದ ಈ ಕೆಳಗಿನಂತೆ ಆದೇಶ.

**-::ಆದೇಶ::-**

**ಸಂ/ಕಂ/ವಿವಾದ/91/2016-17** **ದಿನಾಂಕ:21/6/2016**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಬಳ್ಳಾರಿ ತಾಲೂಕು ಕೋಳೂರು ಹೋಬಳಿಯ ಸೋಮಸಮುದ್ರ ಗ್ರಾಮದ ಸರ್ವೆ ನಂ:185/ಎ1 ವಿಸ್ತೀರ್ಣ:5.08, 185/ಎ/3ಸಿ ವಿಸ್ತೀರ್ಣ:5.00 ಎಕರೆ ಜಮೀನನ್ನು ಶ್ರೀಮತಿ ಡಿ ಪಾರ್ವತಮ್ಮ ಗಂಡ ದಿ॥ ಡಿ.ಈರಬಸಪ್ಪ ಇವರ ಹೆಸರಿಗೆ ಪೌತಿ ಪಟ್ಟಾ ಮಾಡಲು ಆದೇಶಿಸಲಾಗಿದೆ.

ಈ ಆದೇಶವು ಇಂದು ದಿನಾಂಕ:21-6-2016ರಂದು ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು
ಬಳ್ಳಾರಿ

ತಹಶೀಲ್ದಾರರು ಬಳ್ಳಾರಿ
Tasildar, Bellary.

23/6/16 ಜಾರಿಗೊಳಿಸಲಾಗಿದೆ.

ಪ್ರತಿಯನ್ನು:

1.ವಾದಿಗಳು

2.ಶಿರಸ್ತೇದಾರರು ಭೂಮಿ ಗಣಿಕೀಕರಣ ಕೇಂದ್ರ ಶಾಖೆಗೆ ಸೂಕ್ತ ಕ್ರಮಕ್ಕಾಗಿ.

3.ಆದೇಶದ ಕಡತಕ್ಕೆ.